KPSC AND KANNADA GK GROUP

PRADEEP

ವಿಷಯ :- ಭೂಗೋಳ ಶಾಸ್ತ್ರ (GEOGRAPHY)

ಇಂಡಿಯಾ ಎಂಬ ಹೆಸರು ಸಿಂಧೂ ನದಿಯಿಂದ ಬಳಕೆಗೆ ಬಂದಿದೆ.

- ಭಾರತವು ಒಟ್ಟು 32,87,263 ಚದರ ಕಿ.ಮೀ. ವಿಸ್ತಾರವಾಗಿದೆ.
- ಭಾರತದ ಮಧ್ಯಭಾಗದಲ್ಲಿ 23 ಳಿ೦ ಉತ್ತರ ಅಕ್ಷಾಂಶ ಹಾಯ್ದು ಹೋಗುತ್ತದೆ.
- ಭಾರತದ ದಕ್ಷಿಣ ತುದಿಯಲ್ಲಿರುವ ದೇಶ ಶ್ರೀಲಂಕಾ
- ಭಾರತವು ಹೊಂದಿರುವ ಉದ್ದವಾದ ಕರಾವಳಿಯು 6100 ಕಿ.ಮೀ. ಆಗಿದೆ.
- ಭಾರತವು ಏಷ್ಯಾ ಖಂಡದ ದಕ್ಷಿಣ ಭಾಗದಲ್ಲಿದೆ.
- ಭಾರತವು ಭೂಮಿಯ ಉತ್ತರ ಗೋಳಾರ್ಧದಲ್ಲಿದೆ.
- ಭಾರತದ ಭೂರಾಶಿಯ ದಕ್ಷಿಣ ತುದಿ ಇಂದಿರಾ ಪಾಯಿಂಟ್
- ಭಾರತದ ದಕ್ಷಿಣದ ಭಾಗದ ಭೂಶಿರದ ಹೆಸರು ಕನ್ಯಾಕುಮಾರಿ
- ಇಂದಿರಾಪಾಯಿಂಟ್ ಇರುವ ದ್ವೀಪ ಗ್ರೇಟ್ ನಿಕೋಬಾರ್ ದ್ವೀಪ
- ಭಾರತವು ಪ್ರಪಂಚದ 7 ನೇ ದೊಡ್ಡ ದೇಶವಾಗಿದೆ.

downloaded from: www.kpscvaani.com

• ಭಾರತದಲ್ಲಿ ಒಟ್ಟು 29 ರಾಜ್ಯಗಳು & 6 ಕೇಂದ್ರಾಡಳಿತ ಪ್ರದೇಶಗಳಿವೆ.

• 2011 ರ ಜನಗಣತಿಯ ಪ್ರಕಾರ ಭಾರತದ ಜನಸಂಖ್ಯೆ 121 ಕೋಟಿ.

• ಭಾರತವು 8°4' ಉತ್ತರ ಅಕ್ಷಾಂಶದಿಂದ 37°6' ಉತ್ತರ ಅಕ್ಷಾಂಶದವರೆಗೆ ಹರಡಿದೆ.

• ಭಾರತವು ದಕ್ಷಿಣದ ಕನ್ಯಾಕುಮಾರಿ ಭೂಶಿರದಿಂದ ಉತ್ತರದ ಕಾಶ್ಮೀರದವರೆಗೆ 3214 ಕಿ.ಮೀ.ಉದ್ದವಾಗಿದೆ. (ಭಾರತದ ದಕ್ಷೀಣೋತ್ತರ ಉದ್ದ)

• ದ್ವೀಪಗಳನ್ನು ಪರಿಗಣಿಸಿದಾಗ ಗ್ರೇಟ್ ನಿಕೋಬಾರ್ ದ್ವೀಪದ ಇಂದಿರಾ ಪಾಯಿಂಟ್ ಭಾರತದ ಅತ್ಯಂತ ದಕ್ಷಿಣ ತುದಿಯಾಗಿದೆ.

• ಭಾರತವು 68°7' ಪೂರ್ವ ರೇಖಾಂಶದಿಂದ 97°25' ಪೂರ್ವ ರೇಖಾಂಶದವರೆಗೆ ಹಬ್ಬಿದೆ.

• ಭಾರತವು ಪೂರ್ವ-ಪಶ್ಚಿಮವಾಗಿ 2933 ಕಿ.ಮೀ.ಅಗಲವಾಗಿದೆ.

• 82ಳಿ° ರೇಖಾಂಶವನ್ನಾಧರಿಸಿ ಭಾರತದ ಪ್ರಮಾಣ ವೇಳೆಯನ್ನು ನಿಗದಿಪಡಿಸಲಾಗಿದೆ.

• ಭಾರತದ ಕಾಲಮಾನವು ಗ್ರೀನವಿಚ್ ಕಾಲಮಾನಕ್ಕಿಂತ 5:30 ಗಂಟೆ ಮುಂದೆ ಇರುವುದು.

• ಭಾರತದ ಭೂಗಡಿಯ ಉದ್ದ 15200 ಕಿ.ಮೀ.ಗಳು.

downloaded from: www.kpscvaani.com

ಭಾರತದ ಭೂಸ್ವರೂಪವನ್ನು 4 ಪ್ರಧಾನ ವಿಭಾಗಗಳಾಗಿ ವಿಂಗಡಿಸಲಾಗಿದೆ.

• ಮಹಾ ಹಿಮಾಲಯವನ್ನು ಹಿಮಾದ್ರಿ ಎಂದು ಕರೆಯುವರು.

• ಪ್ರಪಂಚದಲ್ಲಿಯೇ ಮೌಂಟ್ ಎವರೆಸ್ಟ (8848 ಮೀ) ಅತ್ಯುನ್ನತ ಶಿಖರವಾಗಿದೆ.

• ಉತ್ತರ ಭಾರತದ ಮೈದಾನವು ಮೆಕ್ಕಲು ಮಣ್ಣಿನಿಂದ ನಿರ್ಮಾಣವಾಗಿದೆ.

• ಪಶ್ಚಿಮ ಘಟ್ಟಗಳನ್ನು ಮಹಾರಾಷ್ಟ್ರದಲ್ಲಿ ಹಾಗೂ ಕರ್ನಾಟಕದಲ್ಲಿ ಸಹ್ಯಾದ್ರಿ ಎಂದು ಕರೆಯುವರು.

• ಹಿಮಾಲಯ ಪಾದ ಬೆಟ್ಟಗಳಿಗಿರುವ ಮತ್ತೊಂದು ಹೆಸರು ಶಿವಾಲಿಕ್ ಬೆಟ್ಟಗಳು.

• ಹಿಮಾಲಯ ಪರ್ವತ ಶ್ರೇಣಿಯು ಪಾಮೀರ ಗ್ರಂಥಿಯಿಂದ ಪ್ರಾರಂಭವಾಗಿ ಪೂರ್ವದಲಿ ್ಲಅರುಣಾಚಲ ಪ್ರದೇಶದವರೆಗೆ ಸುಮಾರು 2500 ಕಿ.ಮೀ.ಉದ್ದವಾಗಿ ಹಬ್ಬಿದೆ.

• ಹಿಮಾಲಯ ಪರ್ವತಗಳಲ್ಲಿ ಅತಿ ಎತ್ತರವಾದ ಹಾಗೂ ಮೊದಲು ನಿರ್ಮಿತಗೊಂಡಿರುವ ಸರಣಿ ಹಿಮಾದ್ರಿ.

• ಪ್ರಪಂಚದಲ್ಲಿಯೇ ಅತ್ಯುನ್ನತ ಶಿಖರವಾದ ಮೌಂಟ್ ಎವರೆಸ್ಟ ನೇಪಾಳ & ಟಿಬೇಟ್ ಮಧ್ಯದಲ್ಲಿದೆ.

• ಗಂಗಾನದಿಯ ಉಗಮ ಸ್ಥಾನ ಗಂಗೋತ್ರಿ ಹಿಮನದಿ.

downloaded from: www.kpscvaani.com

• ಭಾರತದ ಅತ್ಯುನ್ನತವಾದ ಶಿಖರ -  ಕೆ2 ಅಥವಾ ಮೌಂಟ ಗಾಡ್ವಿನ್ ಅಸ್ಟಿನ್

• ಉತ್ತರ ಮಹಾ ಮೈದಾನವನ್ನು ಸತ್ಲಜ್    ಗಂಗಾ ಮೈದಾನವೆಂತಲೂ ಕರೆಯುವರು.

• ಭಾರತದ ಭೂಸ್ವರೂಪ ವಿಭಾಗಗಳಲ್ಲಿ ಅತಿ ದೊಡ್ಡದು ಪರ್ಯಾಯ ಪ್ರಸ್ಥಭೂಮಿ.

• ಭಾರತದ ಅತಿ ಪುರಾತನ ಭೂಭಾಗ ಪರ್ಯಾಯ ಪ್ರಸ್ಥಭೂಮಿ.

• ಪರ್ಯಾಯ ಪ್ರಸ್ಥಭೂಮಿಯ ಒಟ್ಟು ವಿಸ್ತೀರ್ಣ 16 ಲಕ್ಷ ಚ.ಕಿ.ಮೀ.

• 16. ಅಣ್ಣಾಮಲೈ ಸರಣಿಯ ಅನೈಮುಡಿ ಶಿಖರ ದಕ್ಷಿಣ ಭಾರತದಲ್ಲಿಯೇ ಅತ್ಯುನ್ನತ ಪ್ರದೇಶವಾಗಿದೆ.

• ಪೂರ್ವ ಘಟ್ಟಗಳು ಹಾಗೂ ಪಶ್ಚಿಮ ಘಟ್ಟಗಳು ನೀಲಗಿರಿ ಬೆಟ್ಟಗಳಲ್ಲಿ ಸಂಧಿಸುತ್ತವೆ.

• ಪಶ್ಚಿಮ ಕರಾವಳಿಯನ್ನು ಕರ್ನಾಟಕದಲ್ಲಿ ಕೊಂಕಣ ತೀರ ಎಂದು ಕರೆಯುವರು.

• ಒರಿಸ್ಸಾದ ಚಿಲ್ಕಾ ಹಾಗೂ ತಮಿಳುನಾಡಿನ ಪುಲಿಕಾಟ್ ಸರೋವರಗಳು ಉಪ್ಪುನೀರಿನ ಸರೋವರಗಳಾಗಿವೆ.

• ಭಾರತಕ್ಕೆ ಸೇರಿದ 247 ದ್ವೀಪಗಳಿವೆ. ಇವುಗಳಲ್ಲಿ 204 ದ್ವೀಪಗಳು ಬಂಗಾಳ ಕೊಲ್ಲಿಯಲ್ಲಿ ಮತ್ತು 43 ದ್ವೀಪಗಳು ಅರಬ್ಬಿ ಸಮುದ್ರದಲ್ಲಿವೆ.

downloaded from: www.kpscvaani.com

• ಅಂಡಮಾನ್ & ನಿಕೋಬಾರ್ ದ್ವೀಪಗಳು ಗಟ್ಟಿಯಾದ ಜ್ವಾಲಾಮುಖಿ ನಿರ್ಮಿತ ಶಿಲೆಗಳಿಂದ ಕೂಡಿವೆ.

• ಲಕ್ಷದ್ವೀಪಗಳು ಹವಳಗಳಿಂದ ನಿರ್ಮಿತವಾಗಿವೆ.

• ಅಸ್ಸಾಂ, ಮೇಘಾಲಯಗಳಲ್ಲಿ ಕಂಡುಬರುವ ಅರಣ್ಯದ ಪ್ರಕಾರವು ನಿತ್ಯ ಹರಿದ್ವರ್ಣ ಅರಣ್ಯ ಆಗಿದೆ.

• ಹಿಮಾಲಯದಲ್ಲಿ ಅಲ್ಫೈನ್ ಅರಣ್ಯಗಳು ಕಂಡುಬರುತ್ತವೆ.

• ಗಂಗಾನದಿ ಮುಖಜ ಭೂಮಿಯನ್ನು ಸುಂದರಬನ ಎಂದು ಕರೆಯುತ್ತಾರೆ.

• ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವು ಕರ್ನಾಟಕ ರಾಜ್ಯದಲ್ಲಿದೆ.

• ಸುಂದರಬನ್ ಎಂದು ಕರೆಯಲು ಸುಂದರಿ ಮರಗಳು ಬೆಳೆಯಲು ಕಾರಣವಾಗಿದೆ.

• ದೇಶದಲ್ಲಿ ಅರಣ್ಯ ಪ್ರದೇಶದ ಹಂಚಿಕೆಯಲ್ಲಿ ಮಧ್ಯಪ್ರದೇಶ ರಾಜ್ಯ ಪ್ರಥಮ ಸ್ಥಾನದಲ್ಲಿದ್ದರೆ,

• ಹರಿಯಾಣ ರಾಜ್ಯವು ಕೊನೆ ಸ್ಥಾನದಲ್ಲಿದ್ದು, ಕರ್ನಾಟಕವು 13ನೇ ಸ್ಥಾನದಲ್ಲಿದೆ.

• ಭಾರತದಲ್ಲಿ ಇಂದು 523 ವನ್ಯಜೀವಿ ಧಾಮಗಳಿವೆ.

• ಭಾರತದಲ್ಲಿ ಸ್ಥಾಪಿತವಾದ ಮೊದಲ ರಾಷ್ಟ್ರೀಯ ಉದ್ಯಾನವನವೆಂದರೆ ಉತ್ತರಾಂಚಲದ ಜಿಮ್ ಕಾರ್ಬೆಟ್.

• ಜೀವವ್ಯವಸ್ಥೆಯನ್ನು ಕಾಪಾಡಲು ದೇಶದಲ್ಲಿ 18 ಜೈವಿಕ ವಲಯಗಳನ್ನು ಸಂರಕ್ಷಿಸಲಾಗಿದೆ.

downloaded from: www.kpscvaani.com

• ದೇಶದಲ್ಲಿ ಪ್ರಥಮ ಜೈವಿಕ ಸಂರಕ್ಷಣಾ ವಲಯ ನೀಲಗಿರಿ ಸಂರಕ್ಷಣಾ ವಲಯ.

• ದಾಮೋದರ ನದಿಯನ್ನು ಬಂಗಾಳದ ಕಣ್ಣೀರಿನ ನದಿ ಎಂದು ಕರೆಯುತ್ತಾರೆ.

• ಬಿಹಾರದ ಕಣ್ಣೀರಿನ ನದಿ ಕೋಸಿ ನದಿ.

• ಕರ್ನಾಟಕದ ದೊಡ್ಡ ನೀರಾವರಿ ಯೋಜನೆ ಕೃಷ್ಣಾ ಮೇಲ್ದಂಡೆ ಯೋಜನೆ.

• ಕಾವೇರಿ ನದಿಗೆ ಶಿವನಸಮುದ್ರ ಎಂಬಲ್ಲಿ ವಿದ್ಯುಚ್ಛಕ್ತಿ ಯೋಜನೆಯನ್ನು ನಿರ್ಮಿಸಲಾಗಿದೆ.

• ಹಿರಾಕುಡ್ ಯೋಜನೆಯನ್ನು ಮಹಾನದಿಗೆ ನಿರ್ಮಿಸಲಾಗಿದೆ.

• ದಾಮೋದರ ನದಿ ಕಣಿವೆ ಯೋಜನೆಯು ಸ್ವತಂತ್ರ ಭಾರತದ ಮೊದಲನೆಯ ವಿವಿದೋದ್ದೇಶನದಿ ಕಣಿವೆ ಯೋಜನೆಯಾಗಿದೆ.

• ಭಾಕ್ರಾ ನಂಗಲ್ ಯೋಜನೆಯು ಭಾರತದಲ್ಲಿಯೇ ಅತ್ಯಂತ ಎತ್ತರವಾದ ವಿವಿದೋದ್ದೇಶ ನದಿ ಕಣಿವೆ ಯೋಜನೆಯಾಗಿದೆ.

• ಭಾಕ್ರಾ ನಂಗಲ್  : ಗೋವಿಂದ ಸಾಗರ : : ತುಂಗಭದ್ರಾ : ಪಂಪಸಾಗರ.

• ಮಹಾನದಿಯನ್ನು ಒರಿಸ್ಸಾದ ಕಣ್ಣೀರಿನ ನದಿ ಎಂದು ಕರೆಯುತ್ತಾರೆ.

• ಹಿರಾಕುಡ್ ಆಣೆಕಟ್ಟು ಭಾರತದಲ್ಲಿಯೇ ಅತ್ಯಂತ ಉದ್ದವಾದ ಆಣೆಕಟ್ಟಾಗಿದೆ.

downloaded from: www.kpscvaani.com

• ಭಾರತದಲ್ಲಿ ಝಾರ್ಖಂಡ್ & ಓರಿಸ್ಸಾ ರಾಜ್ಯಗಳು ಅತಿ ಹೆಚ್ಚು ಕಬ್ಬಿಣದ ಅದಿರಿನ ನಿಕ್ಷೇಪವನ್ನು ಹೊಂದಿವೆ.

• ಬಾಕ್ಸೈಟ್ ಅದಿರಿನಿಂದ ಅಲ್ಯೂಮಿನಿಯಂ ಲೋಹವನ್ನು ಉತ್ಪಾದಿಸುತ್ತಾರೆ.

• ಅಭ್ರಕವನ್ನು ಕಾಗೆ ಬಂಗಾರ ಎಂದು ಕರೆಯುತ್ತಾರೆ.

• ಕಬ್ಬಿಣದ ಮಿಶ್ರ ಲೋಹಗಳಲ್ಲಿ ಅತಿ ಮುಖ್ಯವಾದ ಮಿಶ್ರ ಲೋಹ ಮ್ಯಾಂಗನೀಸ್ ಆಗಿದೆ.

• ಭಾರತವು ಅಭ್ರಕ ಅದಿರಿನ ಉತ್ಪಾದನೆಯಲ್ಲಿ ಪ್ರಪಂಚದಲ್ಲಿ ಅಗ್ರ ಸ್ಥಾನದಲ್ಲಿದೆ.

• ಚಿನ್ನವು ಪ್ರಾಚೀನ ಕಾಲದಿಂದಲೂ ಪ್ರಪಂಚದಾದ್ಯಂತ ಅತ್ಯಂತ ಹೆಚ್ಚಿನ ಮೌಲ್ಯವನ್ನು ಹೊಂದಿದ

• ಲೋಹವಾಗಿದೆ.

• ದ್ರವರೂಪದ ಚಿನ್ನ : ಪೇಟ್ರೋಲಿಯಂ : : ಕಪ್ಪು ಬಂಗಾರ : ಕಲ್ಲಿದ್ದಲು.

• ಭಾರತದ ಆಸ್ಸಾಂನ ‘ದಿಗ್ಬಾಯಿ’ ಎಂಬಲ್ಲಿ ಪೆಟ್ರೋಲಿಯಂನ್ನು ಮೊದಲು ಪತ್ತೆ ಹಚ್ಚಲಾಯಿತು.

• ಬಾಂಬೈ ಹೈ ಪ್ರದೇಶವು ಭಾರತದ ಅತಿ ದೊಡ್ಡ ತೈಲ ನಿಕ್ಷೇಪವಾಗಿದೆ.

downloaded from: www.kpscvaani.com

• ಭಾರತದಲ್ಲಿ ಮೊದಲ ಸೌರ ವಿದ್ಯುತ್ ಉತ್ಪಾದನಾ ಕೇಂದ್ರವನ್ನು ರಾಜಸ್ತಾನದ ಬಾರ್ ಮರ್ ನಲ್ಲಿ ಸ್ಥಾಪಿಸಲು ಯೋಜಿಸಲಾಗಿದೆ.

ಬೆಂಗಾಲ್ ಐರನ್ ಕಂಪನಿಯು ಪಶ್ಚಿಮ ಬಂಗಾಲದ ಕುಲ್ಟಿ ಎಂಬಲ್ಲಿ 1870 ರಲ್ಲಿ ಸ್ಥಾಪಿತಗೊಂಡಿತು.

• ವಿವಿಧ ಬಗೆಯ ನಾರುಗಳಿಂದ ಬಟ್ಟೆಯನ್ನು ತಯಾರಿಸುವದನ್ನೇ ಜವಳಿ ಕೈಗಾರಿಕೆ ಎಂದುಕರೆಯುವರು.

• ಸಕ್ಕರೆ ಕೈಗಾರಿಕೆಯ ಮುಖ್ಯ ಕಚ್ಚಾ ವಸ್ತು ಕಬ್ಬು.

• ಭಾರತದ ಮೊದಲ ಕಾಗದದ ಕೈಗಾರಿಕೆಯು 1840 ರಲ್ಲಿ ಪಶ್ಚಿಮ ಬಂಗಾಳದ ಸೆರಾಂಪುರದಲ್ಲಿ ಹೂಗ್ಲಿನದಿಯ ದಡದಲ್ಲಿ ಸ್ಥಾಪನೆಗೊಂಡಿತು.

• ಭಾರತದಲ್ಲಿ 8 ಕೈಗಾರಿಕಾ ವಲಯಗಳನ್ನು ಗುರುತಿಸಲಾಗಿದೆ.

• ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯನ್ನು ಮೂಲ ಕೈಗಾರಿಕೆ ಎಂದು ಕರೆಯುತ್ತಾರೆ.

• 1907 ರಲ್ಲಿ ಟಾಟಾ ಐರನ್ & ಸ್ಟೀಲ್ ಕಂಪನಿ ಜಮಶೆಡ್ ಪುರ ಬಳಿ, 1919 ರಲ್ಲಿ ದಿ ಇಂಡಿಯನ್ ಐರನ್ & ಸ್ಟೀಲ್ ಕಂಪನಿಯು ಪಶ್ಚಿಮ ಬಂಗಾಳದ ಬರ್ನಪುರ ಬಳಿಯು, 1923 ರಲ್ಲಿ ದಿ ಮೈಸೂರ್ ಐರನ್ ಸ್ಟೀಲ್ ವರ್ಕ್ಸ್ ಕೈಗಾರಿಕೆ ಭದ್ರಾವತಿ ಬಳಿಯು ಸ್ಥಾಪಿಸಿತು.

downloaded from: www.kpscvaani.com

• ಭಾರತದಲ್ಲಿ ಮೊದಲ ಹತ್ತಿ ಬಟ್ಟೆ ಕೈಗಾರಿಕೆಗಳು 1854 ರಲ್ಲಿ ಮುಂಬೈ & ಬರೂಚ್ ಗಳಲ್ಲಿ ಸ್ಥಾಪಿಸಲ್ಪಟ್ಟವು.

• ಮಾಹಾರಾಷ್ಟ್ರದ ಮುಂಬಯಿಯಲ್ಲಿ ಅತಿ ಹೆಚ್ಚು ಹತ್ತಿ ಬಟ್ಟೆ ಗಿರಿಣಿಗಳಿದ್ದು, ಇದನ್ನು ಭಾರತದ 'ಮ್ಯಾಂಚೆಸ್ಟರ್' ಅಥವಾ ಭಾರತದ 'ಕಾಟನೋಪೊಲಿಸ್' ಎಂದು ಕರೆಯುತ್ತಾರೆ.

Geography

• ಜನಸಂಖ್ಯಾ ಹಂಚಿಕೆಯನ್ನು ವಿವರಿಸಲು ಸಾಂದ್ರತೆ ಎಂಬ ಪದವನ್ನು ಬಳಸಲಾಗುವದು.

• 2011ರ ಜನಗಣತಿಯ ಪ್ರಕಾರ ಭಾರತದ ಒಟ್ಟು ಜನಸಂಖ್ಯೆ 121 ಕೋಟಿ.

• ಭಾರತದ ಸರಾಸರಿ ಜನಸಾಂದ್ರತೆಯ ಪ್ರಮಾಣ ಪ್ರ.ಚ.ಕಿ.ಮೀ.ಗೆ 382 ರಷ್ಟಿದೆ.

• ಅತಿ ಹೆಚ್ಚು ಜನಸಂಖ್ಯೆಯನ್ನು ಹೊಂದಿದ ರಾಜ್ಯ ಉತ್ತರ ಪ್ರದೇಶ.

• ಅತಿ ಕಡಿಮೆ ಜನಸಂಖ್ಯೆಯನ್ನು ಹೊಂದಿದ ರಾಜ್ಯ ಸಿಕ್ಕಿಂ.

• ಭಾರತದಲ್ಲಿ ಅತಿ ಹೆಚ್ಚು ಜನಸಾಂದ್ರತೆಯ ರಾಜ್ಯ ಬಿಹಾರ.

• ಭಾರತದಲ್ಲಿ ಅತಿ ಕಡಿಮೆ ಜನಸಾಂದ್ರತೆಯ ರಾಜ್ಯ ಅರುಣಾಚಲ ಪ್ರದೇಶ.

• ಭಾರತದಲ್ಲಿ ಮೊದಲ ಬಾರಿಗೆ 1872 ರಲ್ಲಿ ಜನಗಣತಿ ಆರಂಭವಾಯಿತು.

downloaded from: www.kpscvaani.com

• 2011ರ ಜನಗಣತಿಯ ಪ್ರಕಾರ ಭಾರತದ ಸರಾಸರಿ ಸಾಕ್ಷರತೆಯ ಪ್ರಮಾಣ ಶೇ. 74.04%.

• 2011ರ ಜನಗಣತಿಯ ಪ್ರಕಾರ ಭಾರತದಲ್ಲಿ ಗರಿಷ್ಟ ಸಾಕ್ಷರತೆಯನ್ನು ಹೊಂದಿದ ರಾಜ್ಯ ಕೇರಳ.

• 2011ರ ಜನಗಣತಿಯ ಪ್ರಕಾರ ಭಾರತದಲ್ಲಿ ಕನಿಷ್ಟ ಸಾಕ್ಷರತೆಯನ್ನು ಹೊಂದಿದ ರಾಜ್ಯ ಬಿಹಾರ.

• ಭಾರತದ ಸರಾಸರಿ ಲಿಂಗಾನುಪಾತ ಪ್ರತಿ 1000 ಪುರುಷರಿಗೆ 940 ಮಹಿಳೆಯರು.

• ಉದ್ಯಮಿ ಎಂಬ ಪದವು ಪ್ರೆಂಚ್ ಪದ ಎಂಟ್ರ ಪ್ರೆಂಡೆನಿಂದ ಬಂದಿದೆ.

• ಉದ್ಯಮಿಯು ಉದ್ದಿಮೆ ಸ್ಥಾಪಿಸಲು ಕೈಗೊಳ್ಳುವ ಕ್ರಿಯೆಗಳನ್ನು ಉದ್ಯಮಗಾರಿಕೆ ಎನ್ನುತ್ತೇವೆ.

• ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ತಾಪಿಸಲು ಜಿಲ್ಲಾ ಕೈಗಾರಿಕಾ ಕೇಂದ್ರಗಳನ್ನು 1978

• ರಲ್ಲಿ ಸ್ಥಾಪಿಸಲಾಯಿತು.

• ಅಪೋಲೋ ಆಸ್ಪತ್ರೆಯ ರೂವಾರಿಗಳು ಡಾ. ಪ್ರತಾಪರೆಡ್ಡಿ

• ವಿಪ್ರೋ ಸಂಸ್ಥೆಯ ಅಧ್ಯಕ್ಷರು ಅಜೀಮ್ ಪ್ರೇಮ್    ಜಿ.

• ಉದ್ಯಮಿಗಳು ಒಂದು ದೇಶದ ಉಆP ಮತ್ತು ತಲಾವರಮಾನ ಹೆಚ್ಚಿಸುತ್ತಾರೆ.

downloaded from: www.kpscvaani.com

• ಅಪ್ರೋಲೋ ವೈದ್ಯಶಾಲೆಗಳ ಗುಂಪು ಹುಟ್ಟು ಹಾಕಿದವರು ಡಾ. ಪ್ರತಾಪರಡ್ಡಿ.

• ಜೆಟ್ ವಾಯುಮಾರ್ಗಗ¼ನ À್ನು ಹುಟ್ಟು ಹಾಕಿದವರು ನರೇಶ್ ಗೋಯಲ್

• 1999 ರಲ್ಲಿ ಭಾರತದಲ್ಲಿ ಇನ್ಫೋಸಿಸ್ ತಂoveÀ್ರ Á್ಣನ ನಿಗಮವನ್ನು ಸ್ಥಾಪಿಸಿದವರು ನಾರಾಯಣಮೂರ್ತಿಯವರು.

• ಓಂ೯ಆಂಕಿ ನಲ್ಲಿ ನೊಂದಾಯಿಸಿಕೊಂಡ ಭಾರತದ ಪ್ರಪ್ರಥಮ ತಂತ್ರಜ್ಞಾನ ಸಂಸ್ಥೆ ಇನ್ಫೋಸಿಸ್.

• ಬಿಳಿಕ್ರಾಂತಿಯ ಪಿತಾಮಹ ಎಂದು ಕರೆಯಲ್ಪಡುವವರು ವರ್ಗೀಸ್ ಕುರಿಯನ್.

• ವರ್ಗೀಸ್ ಕುರಿಯನ್ ರವರು ಗುಜರಾತ್ ರಾಜ್ಯದ ಕೈರಾ ಜಿಲ್ಲೆಯಲ್ಲಿ ಆನಂದ್ ಹೈನುಗಾರಿಕೆ ಕೇಂದ್ರವನ್ನು ಆರಂಭಿಸಿದರು.

• ಧೀರೂಬಾಯಿ ಅಂಬಾನಿಯವರು ಮೌಂಟ್ ಗಿರ್ ನಾರ್ ಎಂಬಲ್ಲಿ ವಾರಾಂತ್ಯದ ಭಜನೆಗಳ ಪುಸ್ತಕಗಳೊಂದಿಗೆ ಉದ್ಯಮ ಪ್ರಾರಂಭಿಸಿದರು.

• ಧೀರೂಬಾಯಿ ಅಂಬಾನಿಯವರು ರಿಲಯನ್ಸ್ ಸಂಸ್ಥೆ ಪ್ರಪಂಚದಲ್ಲೇ ಮುಖ್ಯ ಉದ್ಯಮವಾಗಿದೆ.

• ಭಾರತದ ದೂರದರ್ಶನ ಕ್ಷೇತ್ರದಲ್ಲಿ ಅಧಿಪತ್ಯ ಸಾಧಿಸಿದ ರಾಣಿ ಏಕ್ತಾಕಪೂರ್.

downloaded from: www.kpscvaani.com

• 2001 ರಲ್ಲಿ ವರ್ಷದ ಉದ್ಯಮಿ ಪ್ರಶಸ್ತಿಯನ್ನು ಏಕ್ತಾಕಪೂರ್ ಗೆ ನೀಡಿ ಗೌರವಿಸಿದೆ.

• ಕರಣ್ ಮುಜುಮ್ ದಾರ್ µ◌ಂರವರು ಬಯೋಕಾನ್ ನಿಗಮದ ಅಧ್ಯಕ್ಷರು & ಆಡಳಿತ ನಿರ್ದೇಶಕರಾಗಿದ್ದಾರೆ.

• ಜೀವ ವಿಜ್ಞಾನ ತಂತ್ರಜ್ಞಾನ ಸಂಸ್ಥೆ 1978 ರಲ್ಲಿ ಪ್ರಾರಂಭವಾಯಿತು.

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಹೆಸರು ನಾಡ ಪ್ರಭು ಕೆಂಪೇಗೌಡ

• ಹಳ್ಳಿಗಳು & ಕೃಷಿ ಅಭಿವೃದ್ಧಿಗೆ ರಸ್ತೆಗಳು ಅವಶ್ಯಕವಾಗಿವೆ.

• ಭಾರತದ ಹೆಬ್ಬಾಗಿಲು ಎಂದು ಮುಂಬಯಿ ಬಂದರನ್ನು ಕರೆಯುತ್ತಾರೆ.

• ವಸ್ತುಗಳು, ಸೇವೆಗಳು, ಮಾಹಿತಿ & ಸರಕುಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸುವದನ್ನೇ ಸಾರಿಗೆ ಎಂದು ಕರೆಯುವರು.

• ಭಾರತ ಸರಕಾರವು ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣ ಮತ್ತು ನಿರ್ವಹಣೆಗೆ 1989 ರಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವನ್ನು ಸ್ಥಾಪಿಸಿದೆ.

• ಕುಲುಮನಾಲಿ ಮತ್ತು ಲ್ಹೇಗಳನ್ನು ಸಂಪರ್ಕಿಸುವ ಹೆದ್ದಾರಿ 4267 ಮೀ. ಎತ್ತರದಲ್ಲಿದೆ. ಇದು ಜಗತ್ತಿನ ಎತ್ತರದ ರಸ್ತೆ ಮಾರ್ಗವಾಗಿದೆ.

• ಕಾಂಡ್ಲಾ ಕಛ್ ಖಾರಿಯ ಶಿರೋಭಾಗದಲ್ಲಿದೆ.

downloaded from: www.kpscvaani.com

• ಮುಂಬಯಿ ಬಂದರಿನ ಒತ್ತಡವನ್ನು ತಗ್ಗಿಸುವ ಉದ್ದೇಶದಿಂದ ನವಶೇವಾ ಬಂದರನ್ನು ನಿರ್ಮಿಸಲಾಗಿದೆ.

• ಮರ್ಮಗೋವಾ ಬಂದರು ಗೋವಾ ರಾಜ್ಯದ ಝುವಾರಿ ಕೊಲ್ಲಿಯ ಪ್ರದೇಶದಲ್ಲಿದೆ.

• ಕೋಲ್ಕತ್ತಾ ಬಂದರನ್ನು ಭಾರತದ ಚಹದ ಬಂದರು ಎಂದು ಕರೆಯಲಾಗುತ್ತಿದೆ.

• ಹಾಲ್ಡಿಯಾ ಬಂದರು ಕೊಲ್ಕತ್ತಾ ಬಂದರಿನ ಒತ್ತಡ ಕಡಿಮೆ ಮಾಡಲು ನಿರ್ಮಿಸಿರುವ ಕೃತಕ ಬಂದರಾಗಿದೆ.

• ಭಾರತ ಸರಕಾರವು 1955 ರಲ್ಲಿ 'ದಿ ಏರ್ ಪೋರ್ಟ ಅಥಾರಿಟಿ ಆಫ್ ಇಂಡಿಯಾ'

• ಸಂಸ್ಥೆಯನ್ನು ಸ್ಥಾಪಿಸಿದ್ದು, ದೇಶದ ವಿಮಾನ ನಿಲ್ದಾಣಗಳ ನಿರ್ವಹಣೆಯನ್ನು ನೀಡಲಾಗಿದೆ.

• ಸಹರಾ & ಸಾತ್ರಾಕ್ರೂಜ ಅಂತರಾಷ್ಟ್ರೀಯ ವಿಮಾನ ನಿಲ್ದಾಣಗಳು ಮುಂಬೈನಲ್ಲಿವೆ.

• ದೆಹಲಿ : ಇಂದಿರಾಗಾಂಧಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣ : : ಚನ್ನೈ : ಅಣ್ಣಾ

• ಅಂತರಾಷ್ಟ್ರೀಯ ವಿಮಾನ ನಿಲ್ದಾಣ : : ಕೊಲ್ಕತ್ತಾ : ಸುಭಾಸ್ ಚಂದ್ರ ಬೋಸ್ ವಿಮಾನ ನಿಲ್ದಾಣ.

ADMIN AND PDF BY - PRADEEP ANGADI, VIJAYPUR.

downloaded from: www.kpscvaani.com